**73203** **MB-490**

Sl.No. Total No. of Pages : 3

# ಮೂರನೆಯ ಚತುರ್ಮಾಸ ಬಿ.ಎ./ಬಿ.ಎಸ್.ಡಬ್ಲ್ಯೂ/ಬಿ.ಎಫ್.ಎ. (ಲಲಿತ ಕಲೆ)/ ಬಿ.ಪಿ.ಎ. (ದೃಶ್ಯ ಕಲೆ)/ಬಿ.ವಿ.ಎ. ಪರೀಕ್ಷೆ, ಮಾರ್ಚ್ – 2023

**(ಚತುರ್ಮಾಸ ಸ್ಕೀಮ್ : ಸಿಬಿಸಿಎಸ್)**

**(2019–2020 ರಿಂದ 2021–22ರ ವರೆಗಿನ ವಿದ್ಯಾರ್ಥಿಗಳಿಗೆ)**

**ಕನ್ನಡ ಭಾಷೆ (ಪತ್ರಿಕೆ – ೩)**

**ಕಲಾ ಗಂಗೋತ್ರಿ – ೩ ಕಾವ್ಯ ಭಾಗ – ೧ ಮತ್ತು ಕಥನ ಭಾಗ**

**ಸಮಯ: 3 ಗಂಟೆಗಳು** **ಗರಿಷ್ಠ ಅಂಕಗಳು : 80**

## ಕಾವ್ಯ ಭಾಗ – ೧ (50 ಅಂಕಗಳು)

***ಪ್ರ1)*** ಅ) <u>ಒಂದು</u> ಪದ್ಯಭಾಗದ ಭಾವವನ್ನು ಸಂದರ್ಭ ಸಹಿತ ವಿವರಿಸಿ: [5]

೧) ಯಾರೋ ಅಣ್ಣ ದಾರಿಯ ಬಿಟ್ಟು
ಕಾಡಿಗೆ ಕರೆತಂದೆ
ಅಣ್ಣ ಕಾಡಿಗೆ ಕರೆತಂದೆ
ಏನು ಮಾಡಲಿ ತಂಗಿ ನಮಗೆ
ದಾರಿಯು ತಪ್ಪಿತಲ್ಲ
ಮುಂದೆ ದಾರಿಯು ತಪ್ಪಿತಲ್ಲ
ಕಾಡಿನೊಳಗೆ ಕಳ್ಳರ ಕಾಟ
ಬಹಳ ಉಂಟಮ್ಮ

೨) ನಾನೀಗ ಹಂಸ ತತ್ತ್ವವ ಮುಟ್ಟಿ ಬರೆಸುವೆ
ನೇನಿನ್ನು ಕೆಡಿಸುವರುಂಟೆ
ಜೈನ ಶಾಸನವಿದು ಮಿಕ್ಕವು ಮಿಥ್ಯಾಭಿ
ಧಾನ ಶಾಸನಗಳ್ಳೆಯೆಂದ.

*P.T.O.*

https://www.uomonline.com

ಆ) ಒಂದು ವಾಕ್ಯದಲ್ಲಿ ಉತ್ತರಿಸಿ. [5×1=5]

೧) ಮಾದಾರ ಚೆನ್ನಯ್ಯನ ಅಂಕಿತ ಯಾವುದು?

೨) ತಿರುಕೊಳಪಿನಾಚಿಯ ಮಗನ ಹೆಸರೇನು?

೩) ಭರತನ ಶಾಸನ ಬರೆದ ಕರಣಿಕ ಯಾರು?

೪) ಕಂಕಭಟ್ಟ ಎಂಬ ಹೆಸರು ಯಾರಿಗಿತ್ತು?

೫) 'ಎಳೆಗರುಂ ಎತ್ತಾಗದೆ' ಎಂದವರು ಯಾರು?

ಪ್ರ2) ಮೂರು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ. [3×4=12]

೧) ಬರುವ ವರ್ಷಕೆ ಬರುವುದಿಲ್ಲ ಕಳುಹಬೇಡಿರಿ

೨) ಆಚಾರವೇ ಸ್ವರ್ಗ; ಅನಾಚಾರವೇ ನರಕ

೩) ಕಳವಳದ ಕರಣದ ಮುಗುದೆ ಬಂದಳು ಬಾಣಸಿನ ಮನೆಗೆ

೪) ಬಡವಂ ಬಲ್ಲಿದನಾಗನೇ

೫) ಮಾತಾಡುವ ನಾಲಗೆ ಮುರುಂಟಿದುದು.

ಪ್ರ3) ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. [2×2=4]

ಭೀಮ, ಅಕ್ಕಮ್ಮ, ದೀವಳಿಗ್ಗಬ್ಬ, ಶ್ರೀಚನ್ನಸೋಮೇಶ್ವರಾ

ಆ) ಒಂದು ವಿಷಯ ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ. [4]

೧) ನಡೆನುಡಿ ಸಿದ್ಧಾಂತ

೨) ಅಧಿಕಾರ ಮತ್ತು ಅಹಂಕಾರ

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ. [10]

೧) ಭೀಮ– ದ್ರೌಪದಿಯ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

೨) 'ಲೋಕದಲ್ಲಿ ವ್ಯಕ್ತಿಗೆ ಪಾರಮ್ಯ ಇರುವಂತೆ ಪರಿಮಿತಿಯೂ ಇದೆ' ಎಂಬ ಸತ್ಯ ಭರತೇಶನ ಪಾತ್ರದ ಹಿನ್ನೆಲೆಯಲ್ಲಿ ಅನಾವರಣಗೊಂಡಿದೆ – ವಿವರಿಸಿ.



https://www.uomonline.com

ಪ್ರ5) ಎರಡು ಪ್ರಶ್ನೆಗಳಿಗೆ ಉತ್ತರಿಸಿ. [2×5=10]

೧) ಅಣ್ಣನ ಪ್ರಾಣದೊಂದಿಗೆ ಮಾನವನ್ನು ಕಾಪಾಡಿದ ತಂಗಿಯ ಉದಾತ್ತ ಪಾತ್ರವನ್ನು ನಿರೂಪಿಸಿ.

೨) ವ್ರತಾಚಾರಗಳ ಬಗ್ಗೆ ಅಕ್ಕಮ್ಮನ ಅಭಿಪ್ರಾಯಗಳನ್ನು ತಿಳಿಸಿ.

೩) ತಿರುಕೊಳವಿನಾಚಿಯ ಪ್ರಲಾಪ ಪ್ರಸಂಗವನ್ನು ತಿಳಿಸಿ.

೪) ಮಾದಾರ ಚೆನ್ನಯ್ಯನ ವಚನಗಳ ವಿಶೇಷತೆಯನ್ನು ವಿವರಿಸಿ.

**ಕಥನ ಭಾಗ - (30 ಅಂಕಗಳು)**

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ. [10]

೧) ಮಾನವರ ಅಂತಃಕರಣದ ನಡವಳಿಕೆ ಹಾಗೂ ವಿನಾಶಕಾರಿ ಪ್ರವೃತ್ತಿಗಳು 'ಬಾಗಿಲಿಗೆ ಬಂದ ನವಿಲು' ಲೇಖನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

೨) 'ಬದುಕು ಸದಾ ಅಗ್ನಿದಿವ್ಯವೇ!' ಈ ಹೇಳಿಕೆಯನ್ನು ವಿಶ್ಲೇಷಿಸಿ.

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ. [10]

೧) ನಮ್ಮ ಸಾಂತ್ವನ ಮತ್ತು ಹಾರೈಕೆಗಳು ಸಕಾರಾತ್ಮಕವಾಗಿರಬೇಕೆಂಬ ಜಾಗೃತಿ 'ಉಪಘಾತ' ಕಥನದಲ್ಲಿ ಹೇಗೆ ಒಡಮೂಡಿದೆ? ವಿವರಿಸಿ.

೨) ಕತೆಗಾರ ಇಮಾಂಖಾಸಿಂ ಅವರ ವ್ಯಕ್ತಿತ್ವವನ್ನು ಚಿತ್ರಿಸಿ.

ಪ್ರ8) ಎರಡನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ. [2×5=10]

೧) ನೆರೂಡಾ ಓರ್ವ ಸೃಜನಾತ್ಮಕ ಸಂಗ್ರಹಕಾರನಾದ ಬಗೆಯನ್ನು ತಿಳಿಸಿ.

೨) ತನ್ನ ಮರಿಗಳ ಉಳಿವಿಗೆ ನವಿಲು ತಳೆದ ನಿರ್ಧಾರ ಅಚ್ಚರಿ ಮೂಡಿಸುವಂಥದು - ಸಮರ್ಥಿಸಿ.

೩) ಶಾಬಾನು ಪ್ರಕರಣ ಮತ್ತು ರೂಪ್ ಕನ್ವರಳನ್ನು ಸತಿ ಮಾಡಿದ ಬಗೆ - ನಿರೂಪಿಸಿ.

೪) ನೆಲದ ಮೇಲಿನ ನಾವಿಕ ಯಾರು? ಆತನ ಅಪರೂಪದ ವ್ಯಕ್ತಿತ್ವವನ್ನು ಪರಿಚಯಿಸಿ.

ઉઉ ಬಬ



https://www.uomonline.com